■ ಹನಿ

## ಮರಳಿ ಬೆಳ್ಳಿ ತೆರೆಗೆ

ಆರಾಧ್ಯಾಳಿಗೆ 14 ತಿಂಗಳಾಯಿತು. ಅಮ್ಮ ಐಶ್ವರ್ಯ ರೈ ಪುಟ್ಟ ಮಗಳನ್ನು ಅಜ್ಜಿ ವೃಂದಾ ರೈಯ ಮನೆಯಲ್ಲಿ ಬಿಟ್ಟು ಮೆಹಬೂಬ್ ಸ್ಟುಡಿಯೋ ಕಡೆಗೆ ಜಾಹೀರಾತು ಶೂಟಿಂಗಿಗೆ ಓಡಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾಳೆ. 'ಇನ್ನೇನು, ತಾಯ್ತನದ 24x7 ಜವಾಬ್ದಾರಿಯ ಕಾಲ ಮುಗಿಯಿತು, ಮತ್ತೆ ಸಿನಿಮಾದಲ್ಲಿ ನಟಿಸಬಹುದಲ್ಲ?' ಎನ್ನುವುದು ಬಾಲಿವುಡ್ ನಿರ್ದೇಶಕರ ಪ್ರಶ್ನೆ. ಆದರೆ ಅವರಿಗೆ ಇದ್ದಷ್ಟು ಅರ್ಜೆಂಟ್ ಐಶ್ವರ್ಯಳಿಗೆ ಇಲ್ಲವಂತೆ. ಹಾಗೆಂದು ಆಕೆಯ ನಿಕಟವರ್ತಿಗಳು ಹೇಳಿದ್ದಾರೆ; ಆದರೆ ಆಕೆ ಬಾಯಿ ಬಿಟ್ಟಿಲ್ಲ.

39ರ ಹರೆಯದ ಭಾರತದ ವಿಶ್ವಖ್ಯಾತಿಯ 'ಮಮ್ಮಿ' ಐಶ್ವರ್ಯ ರೈ ಶೀಘ್ರವೇ ಮತ್ತೆ ಸಿನಿಮಾದಲ್ಲಿ ನಟಿಸಲಿದ್ದಾಳೆ ಎನ್ನುವುದು ಬಾಲಿವುಡ್‌ನ ವಾರದ ದೊಡ್ಡ ಸುದ್ದಿ. ಒಂದೆಡೆ ಮಣಿರತ್ನಂ ತಮ್ಮ ಹೊಸ ಚಿತ್ರ (ಡ್ಯಾನ್ ಡು ಮಾರಿಯರ್‌ನ ಕಾದಂಬರಿ ರೆಬೆಕ್ಕಾ ಆಧರಿತ)ದಲ್ಲಿ ನಟಿಸಬೇಕೆಂದು ಐಶ್ವರ್ಯಳನ್ನು ಕೋರಿದ್ದಾರೆ. 1997ರಲ್ಲಿ ಅವರು ನಿರ್ದೇಶಿಸಿದ 'ಇರುವರ್' ತಮಿಳು ಚಿತ್ರವೇ ಐಶ್ ಬೇಬಿಯ ಮೊದಲ ಚಿತ್ರ ಎನ್ನುವ ಹಿನ್ನೆಲೆಯಲ್ಲಿ ಆಕೆ ಮಣಿರತ್ನಂ ಚಿತ್ರವನ್ನು ಒಪ್ಪಿಕೊಳ್ಳಬಹುದು ಎನ್ನುವುದು ನಿರೀಕ್ಷೆ.



ಇನ್ನೊಂದೆಡೆ ಬಾಲಿವುಡ್‌ನ ಯಶಸ್ವಿ ನಿರ್ದೇಶಕ ಕರಣ್ ಜೋಹರ್ 'ಬೇಮಿಸಾಲ್' ಎಂಬ ಹಳೇ ಹಿಂದಿ ಸಿನಿಮಾವನ್ನು ರಿಮೇಕ್ ಮಾಡಲು ಸಿದ್ಧತೆ ಮಾಡಿಕೊಂಡು ಐಶ್ವರ್ಯಳ ಕಾಲ್‌ಶೀಟ್‌ಗಾಗಿ ಕಾದು ಕುಳಿತಿದ್ದಾನೆ. 1982ರ ಹೃಷಿಕೇಶ್ ಮುಖರ್ಜಿ ನಿರ್ದೇಶಿಸಿದ ಈ ಯಶಸ್ವಿ ಚಿತ್ರದಲ್ಲಿ (ಐಶ್ವರ್ಯಳ ಮಾವ) ಅಮಿತಾಭ್ ಹೀರೋ ಆಗಿ ನಟಿಸಿದ್ದರು. ಈ ಫ್ಯಾಮಿಲಿ ಸೆಂಟಿಮೆಂಟ್ ಕಾಲ್‌ಶೀಟ್ ದೊರಕಿಸಬಹುದು ಎನ್ನುವುದು ಕರಣ್ ನಿರೀಕ್ಷೆ.

ಯಾವ ಸಿನಿಮಾವನ್ನು ಒಪ್ಪಿಕೊಂಡರೂ 2013ರ ಏಪ್ರಿಲ್ ವೇಳೆಗೆ ಅದು ಬಹಿರಂಗವಾಗಬಹುದು ಎನ್ನುವುದು ಬಾಲಿವುಡ್ ನಿರೀಕ್ಷೆ. ಏಕೆಂದರೆ ಐಶ್ವರ್ಯ ತೂಕ ಕಡಿಮೆ ಮಾಡಿಕೊಳ್ಳಲು ಈಗಾಗಲೆ ಯೋಗ ಕ್ಲಾಸ್‌ಗೆ ಹೋಗುತ್ತಿದ್ದಾರಂತೆ. ಈ ಸಿದ್ಧತೆ ಸಿನಿಮಾಗೆ ಮರಳಲೆಂದೇ ಎನ್ನುವುದು ಅಭಿಮಾನಿಗಳ ನಂಬಿಕೆ. 1997ರಿಂದ ಈವರೆಗೆ ಒಟ್ಟು 42 ಸಿನಿಮಾಗಳಲ್ಲಿ ನಟಿಸಿರುವ ಐಶ್ವರ್ಯಳ ಅಭಿನಯದ ಪಟ್ಟಿಯಲ್ಲಿ ಐದು ಇಂಗ್ಲಿಷ್ ಸಿನಿಮಾಗಳೂ ಒಳಗೊಂಡಿವೆ. ತಮಿಳು, ತೆಲುಗು, ಹಿಂದಿ, ಬಂಗಾಳಿ– ಹೀಗೆ ಈಗ ಪಂಚಭಾಷಾ ತಾರೆಯಾಗಿರುವ ಮಾಜಿ ವಿಶ್ವಸುಂದರಿ, ತಾಯಿಯಾದ ಬಳಿಕವೂ ಆಕರ್ಷಣೆ ಕಳೆದುಕೊಂಡಿಲ್ಲ ಎನ್ನುವುದು ನೋಡಿದವರ ಅಂಬೋಣ. 2012ರಲ್ಲಿ ಸಿನಿಮಾದಲ್ಲಿ ನಟಿಸದಿದ್ದರೂ, ವಿಶ್ವಸಂಸ್ಥೆಯ ಏಡ್ಸ್ ಕಾರ್ಯಕ್ರಮದ ರಾಯಭಾರಿಯಾಗಿ, ಫ್ರಾನ್ಸ್ ದೇಶದ ಎರಡನೇ ಅತ್ಯುತ್ತಮ ಗೌರವವಾದ ಕಲಾ ಪ್ರಶಸ್ತಿಯನ್ನು ಸ್ವೀಕರಿಸಿ ಸುದ್ದಿಯಲ್ಲಿರುವ ಐಶ್ವರ್ಯ ಮತ್ತೆ ಸಿನಿಮಾದಲ್ಲಿ ನಟಿಸಿದರೆ, ಈಗ ಮುಂಚೂಣಿಯಲ್ಲಿರುವ ಹಿಂದಿ ನಾಯಕಿಯರು ಬೆಚ್ಚುವುದಂತೂ ನಿಶ್ಚಿತ. ●

---

## ಟೆನಿಸಿಗನ ಬಂಡಾಯ

ಭಾರತೀಯ ಟೆನಿಸ್ ತಂಡದಲ್ಲಿ ಮತ್ತೆ ಬಂಡಾಯ ಎದುರಾಗಿದೆ. "ಡೇವಿಸ್ ಕಪ್‌ಗೆ ತಂಡದ (ಆಟ ವಾಡದ) ನಾಯಕರಾಗಿರುವ ಶಿವ ಮಿಶ್ರಾ ಮತ್ತು ಕೋಚ್ ನಂದನ್ ಬಾಲ್‌ರನ್ನು ತಂಡದಿಂದ ಕೈಬಿಡಿ; ಇಲ್ಲವಾದಲ್ಲಿ ನಾವು ಫೆಬ್ರುವರಿ 1ರಂದು ದ.ಕೊರಿಯಾ ವಿರುದ್ಧ ಡೇವಿಸ್ ಕಪ್ ಪಂದ್ಯಗಳನ್ನು ಬಹಿಷ್ಕರಿಸುತ್ತೇವೆ" ಎಂದು ಭಾರತದ 'ನಂಬರ್ ಒನ್' ಆಟಗಾರ ಸೋಮದೇವ್ ದೇವ್ ವರ್ಮನ್ ಗುಟುರು ಹಾಕಿದ್ದಾರೆ. ಅವರ ಜತೆಗೆ ತಂಡದ ಇತರ ಆಟಗಾರರಾದ ಯೂಕಿ ಭಾಂಬ್ರಿ, ದಿವಿಜ್ ಶರಣ್, ಸಾಕೇತ್ ಮೈನೇನಿ ಕೂಡಾ ದನಿಗೂಡಿಸಿದ್ದಾರೆ.

ಈ ಬಂಡಾಯದಿಂದ ನಾಯಕ ಮತ್ತು ಕೋಚ್ ಇಬ್ಬರೂ ಆಶ್ಚರ್ಯಗೊಂಡಿದ್ದಾರೆ. ಸೋಮದೇವ್‌ಗೆ ಎಐಟಿಎ ಜತೆಗೆ ಏನಾದರೂ ಕಿರಿಕಿರಿಗಳಿದ್ದರೆ ಅವರ ಜತೆಗೇ ಬಗೆಹರಿಸಲಿ. ನಮ್ಮನ್ನು ಈ



ವಿವಾದಕ್ಕೆ ಎಳೆಯುವುದು ಬೇಡ' ಎಂದು ನಂದನ್ ಬಾಲ್ ನೇರವಾಗಿ ಹೇಳಿದ್ದಾರೆ. 'ಇವರಿಬ್ಬರೂ ಆಟದ ಆಧುನಿಕ ಶೈಲಿಗೆ ಹೊಂದಿಕೆ ಆಗುವುದಿಲ್ಲ' ಎನ್ನುವುದು ಸೋಮದೇವ್ ದೂರು. 'ನನ್ನ ನಾಯಕತ್ವದಲ್ಲಿ ಆಡಿದಾಗಲೆಲ್ಲ ಸೋಮದೇವ್ ವಿಶ್ವದ ಖ್ಯಾತನಾಮ ಆಟಗಾರರಾದ ಥಾಮಸ್ ಬಲೂಸಿ, ಜಾಂಕೊ, ಯೆನ್ ಸುನ್ ಲು ಮುಂತಾದವರನ್ನು ಸೋಲಿಸಿದ್ದಾರೆ' ಎನ್ನುವುದು ಮಿಶ್ರಾ ಪ್ರತ್ಯುತ್ತರ. ಪಂದ್ಯದ ಗೆಲುವಿನ ಹಣದಲ್ಲಿ ಈಗ ಆಟಗಾರರಿಗೆ, ಟೆನಿಸ್ ಅಸೋಸಿಯೇಶನ್‌ಗೆ 50:50 ಪಾಲು ಸಿಗುತ್ತಿದೆ. ಸೋಮದೇವ್‌ಗೆ ಇದು ಅಸಮಾಧಾನ ಉಂಟು ಮಾಡಿದೆ ಎನ್ನಲಾಗುತ್ತಿದೆ. ಹಣವೇ ಮುಖ್ಯವೆಂದಾದಲ್ಲಿ ಆಟ ಹಿಂದುಳಿಯುವುದು ಖಂಡಿತ. ಇದಕ್ಕೆ ಪೂರ್ವಸೂಚನೆ ಎಂಬಂತೆ ಕಳೆದ ವಾರ ನಡೆದ ಚೆನ್ನೈ ಓಪನ್ ಟೆನಿಸ್‌ನಲ್ಲಿ ಸೋಮದೇವ್ ಕೇವಲ 65 ನಿಮಿಷಗಳಲ್ಲಿ ಥಾಮಸ್ ಬೆರ್ಡಿಕ್ ವಿರುದ್ಧ ಎರಡು ನೇರ ಸೆಟ್‌ಗಳ ಸೋಲುಂಡು ಹೊರಬಿದ್ದಿದ್ದಾರೆ. 2009ರಲ್ಲಿ ಚೆನ್ನೈ ಓಪನ್‌ನ ಫೈನಲ್ ತಲುಪಿದ್ದ ಸೋಮದೇವ್, ಈ ಸಲ ವೈಲ್ಡ್ ಕಾರ್ಡ್ ಎಂಟ್ರಿ ಪಡೆದೂ ಸೋಲುಂಡದ್ದು ಏನನ್ನು ಸೂಚಿಸುತ್ತದೆ? ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65